	ಸಂಘ, ಕೊಡ್ಲಿಪೇಟೆ, ಸೋಮವಾರ ಪೇಟೆ ತಾಲ್ಲೂಕು, ಕೊಡಗು ಜಿಲ್ಲೆ		
	ಒಟ್ಟು		**25.00**

ಕರ್ನಾಟಕ ವಿಧಾನಸಭೆ

376 ಶ್ರೀ. ಈಶ್ವರ್ ಭೀಮಣ್ಣ ಖಂಡ್ರೆ (ಬಾಲ್ಕಿ)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

ಅ) ರಾಜ್ಯದಲ್ಲಿ "ಆರೋಗ್ಯ ಕವಚ" ಮತ್ತು "ತಾಯಿ ಭಾಗ್ಯ" ಯೋಜನೆಯನ್ನು ಎಂದಿನಿಂದ ಜಾರಿಗೆ ತರಲಾಗಿದೆ? ಈ ಯೋಜನೆಯ ವಿಶೇಷಗಳೇನು? ಈ ಯೋಜನೆಯ ಲಾಭ ಪಡೆಯಲು ಯಾವ ಮಾನದಂಡಗಳನ್ನು ರೂಪಿಸಲಾಗಿದೆ?

ರಾಜ್ಯದಲ್ಲಿ ಆರೋಗ್ಯ ಕವಚ ಯೋಜನೆಯನ್ನು ದಿನಾಂಕ:1/11/08 ರಿಂದ ಜಾರಿಗೆ ತರಲಾಗಿದೆ. ಹಾಗೂ ತಾಯಿ ಭಾಗ್ಯ ಯೋಜನೆಯನ್ನು 10/10/2008 ರಿಂದ ಜಾರಿಗೆ ತರಲಾಗಿದೆ.

ಆರೋಗ್ಯ ಕವಚ ಯೋಜನೆಯ ವಿವರಗಳು:

ಯಾವುದೇ ತುರ್ತು ಕರೆಗಳನ್ನು ಮೊಬೈಲ್ ಅಥವಾ ನೇರ ದೂರವಾಣಿ ಮೂಲಕ 108 ಸಂಖ್ಯೆಗೆ ಮಾಡಿದಲ್ಲಿ ಅದು ಅಪಘಾತ, ಹಾವು ಕಡಿತ, ಗರ್ಭಿಣಿ ಪ್ರಕರಣಗಳು ಇತ್ಯಾದಿ ವೈದ್ಯಕೀಯಕ್ಕೆ ಸಂಬಂಧಿಸಿದವೂ ಅಲ್ಲದೆ, ಪೋಲಿಸ್ ಮತ್ತು ಅಗ್ನಿಶಾಮಕಕ್ಕೆ ಸಂಬಂಧಿಸಿದ ಯಾವುದೇ ಕರೆ ಇದ್ದರೂ ಸ್ವೀಕರಿಸಿ ಆಂಬುಲೆನ್ಸಗಳನ್ನು ತುರ್ತು ಸ್ಥಳಕ್ಕೆ ತಲುಪಲು ವ್ಯವಸ್ಥೆ ಮಾಡಲಾಗುತ್ತದೆ. ಆಧುನಿಕ ಉಪಕರಣಗಳನ್ನೊಳಗೊಂಡ ಸುಸಜ್ಜಿತವಾದ ಆಂಬುಲೆನ್ಸ್‌ನಲ್ಲಿ ತರಬೇತಿ ಪಡೆದ ಅರೆ ವೈದ್ಯಕೀಯ ಸಿಬ್ಬಂದಿ ತುರ್ತು ಘಟನೆ ಸ್ಥಳದಲ್ಲಿ ರೋಗಿಗೆ ಚಿಕಿತ್ಸೆ ನೀಡುವ ಮೂಲಕ ಆರೋಗ್ಯವನ್ನು ಸುಧಾರಿಸಿ ತಕ್ಷಣ ಆಸ್ಪತ್ರೆಗೆ ಸೇರಿಸುವ ವ್ಯವಸ್ಥೆ ಮಾಡಲಾಗುತ್ತದೆ. ಮೊದಲ 24 ಘಂಟೆಗಳ ಸೇವೆಯು ಈ ಯೋಜನೆಯಡಿ ಉಚಿತವಾಗಿದೆ. ಹಾಗೂ ರಾಜ್ಯದ ಎಲ್ಲಾ ವರ್ಗದ ಜನರು ಈ ಸೌಲಭ್ಯವನ್ನು ಪಡೆಯಬಹುದಾಗಿದೆ.

ತಾಯಿ ಭಾಗ್ಯ ಯೋಜನೆಯ ವಿವರಗಳು:

ಆಸ್ಪತ್ರೆಗಳಲ್ಲಿ ಹೆರಿಗೆಗಳನ್ನು ಉತ್ತೇಜಿಸುವ ದೃಷ್ಟಿಯಿಂದ ತಾಯಿ ಭಾಗ್ಯ ಎಂಬ ಸಮಗ್ರ ತಾಯಂದಿರ ಆರೋಗ್ಯ ನಿರ್ವಹಣೆ ಯೋಜನೆಯನ್ನು ಅಸ್ತಿತ್ವದಲ್ಲಿದ್ದ ಮಡಿಲು, ಪ್ರಸೂತಿ ಆರೈಕೆ, ಜನನಿ ಸುರಕ್ಷಾ ಯೋಜನೆಗಳ ಜೊತೆಗೆ ತಾಯಿ ಭಾಗ್ಯ ಎಂಬ ಹೊಸ ಕಾಂಪೊನೆಂಟ್ ಸೇರಿಸಿ ಪ್ರಸ್ತುತ ಸಾಲಿನಿಂದ ದಿನಾಂಕ 10-10-2008 ರಿಂದ ಜಾರಿಗೊಳಿಸಲಾಗಿದೆ. ತಾಯಿ ಭಾಗ್ಯ ಎಂಬ ಹೊಸ ಕಾಂಪೊನೆಂಟ್ ಅಡಿಯಲ್ಲಿ ಖಾಸಗಿ ಸೇವೆ ಒದಗಿಸುವವರು ಪ್ರತಿ 100 ಹೆರಿಗೆಗಳನ್ನು ಮಾಡಿಸಿದಲ್ಲಿ ರೂ. 3 ಲಕ್ಷಗಳ ಉತ್ತೇಜಿತ ಹಣವನ್ನು ಪಡೆಯುತ್ತಾರೆ. ಈ ಹೊಸ ಕಾಂಪೊನೆಂಟ್ ರಾಜ್ಯ 6-ಸಿ ವರ್ಗದ ಜಿಲ್ಲೆಗಳು ಅಂದರೆ ಬೀದರ್, ಗುಲ್ಬರ್ಗಾ, ಬಿಜಾಪುರ,

ಬಾಗಲಕೋಟೆ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಜಾರಿಗೆ ತರಲಾಗಿದೆ. ಈ ಕಾರ್ಯಕ್ರಮದ ಅಡಿ ಬಡತನ ರೇಖೆಗಿಂತ ಕೆಳಗಿರುವ ಗರ್ಭಿಣಿ ಮಹಿಳೆಯರು ಮೊದಲ ಎರಡು ಜೀವಂತ ಹೆರಿಗೆಗೆ ನೊಂದಾಯಿತ ಆಸ್ಪತ್ರೆಗಳಲ್ಲಿ ಉಚಿತವಾಗಿ (Cashless Treatment) ಚಿಕಿತ್ಸೆ ಪಡೆಯಬಹುದಾಗಿದೆ. ಅಲ್ಲದೆ ಶಿಶು ಮರಣದ ಪ್ರಮಾಣ (ಐ.ಎಂ.ಆರ್) ಮತ್ತು ತಾಯಂದಿರ ಮರಣ ಪ್ರಮಾಣವನ್ನು ಕ್ರಮವಾಗಿ ಪ್ರತಿ ಸಾವಿರಕ್ಕೆ 30 ರಂತೆ ಮತ್ತು ಪ್ರತಿ ಲಕ್ಷ ನೈಜಜನನಕ್ಕೆ 90 ರಂತೆ ಸಾಧಿಸುವ ಸಲುವಾಗಿ ಮೇಲ್ಕಂಡ 7 ಜಿಲ್ಲೆಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಗರ್ಭಿಣಿ ಸ್ತ್ರೀಯರ ಪೌಷ್ಠಿಕಾಂಶದ ಅವಶ್ಯಕತೆಗಾಗಿ ನೀಡುತ್ತಿದ್ದ ರೂ. 2000 ಉತ್ತೇಜಿತ ಹಣದ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ವಿಸ್ತರಿಸಲಾಗಿದೆ.

ಆ) ಈ ಯೋಜನೆಗಳ ಅನುಷ್ಠಾನಕ್ಕಾಗಿ ಪ್ರಸಕ್ತ ಆಯವ್ಯಯದಲ್ಲಿ ಮೀಸಲಾಗಿಟ್ಟಿರುವ ಹಣವೆಷ್ಟು? ಈವರೆಗೂ ಬಿಡುಗಡೆ ಮಾಡಲಾದ ಮತ್ತು ಖರ್ಚು ಮಾಡಲಾದ ಹಣವೆಷ್ಟು (ಜಿಲ್ಲಾವಾರು ಅಂಕಿ ಅಂಶಗಲನ್ನು ಒದಗಿಸುವುದು)?

ಆರೋಗ್ಯ ಕವಚ ಯೋಜನೆಗೆ ರಾಜ್ಯ ಆಯವ್ಯಯದಲ್ಲಿ ಪ್ರಸಕ್ತ ಸಾಲಿನಲ್ಲಿ ರೂ.10 ಕೋಟಿಗಳನ್ನು ನಿಗಧಿಪಡಿಸಲಾಗಿತ್ತು. ಇದಲ್ಲದೆ 12ನೇ ಹಣಕಾಸು ಆಯೋಗದ ಅಡಿಯಲ್ಲಿ ಈ ಯೋಜನೆಗೆ ರೂ. 20 ಕೋಟಿಗಳನ್ನು (ದಿನಾಂಕ: 31/12/2008 ರಂದು ಇದ್ದಂತೆ) ಅಂದರೆ ಒಟ್ಟಾರೆ ರೂ. 30 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಒಟ್ಟಾರೆ ಇದುವರೆವಿಗೆ ರೂ. 24.87 ಕೋಟಿಗಳ ವೆಚ್ಚವಾಗಿದೆ ತಾಯಿ ಭಾಗ್ಯ ಯೋಜನೆಗೆ ಪ್ರಸಕ್ತ ಸಾಲಿನಲ್ಲಿ ರೂ. 30 ಕೋಟಿಗಳ ಅನುದಾನ ನಿಗಧಿಪಡಿಸಲಾಗಿದ್ದು, ದಿನಾಂಕ:31/12/2008ರ ವರೆಗೆ ರೂ. 15 ಕೋಟಿಗಳು ವೆಚ್ಚವಾಗಿದೆ.

ಇ) ಬೀದರ್ ಜಿಲ್ಲೆಯಲ್ಲಿ ವಿಶೇಷವಾಗಿ ಭಾಲ್ಕಿ ವಿಧಾನ ಸಭಾ ಕ್ಷೇತ್ರದಲ್ಲಿ ಈ ಯೋಜನೆಗಾಗಿ ಈವರೆಗೂ ಖರ್ಚು ಮಾಡಲಾದ ಹಣವೆಷ್ಟು (ಕ್ಷೇತ್ರವಾರು ವಿವರಗಳನ್ನು ಒದಗಿಸುವುದು)?

2008–09 ರಲ್ಲಿ ಪ್ರಥಮ ಹಂತದಲ್ಲಿ ಎಲ್ಲಾ ಜಿಲ್ಲಾ ಕೇಂದ್ರಗಳಿಗೆ ಆರೋಗ್ಯ ಕವಚ ವಿಸ್ತರಿಸಲಾಗಿದೆ. ತಾಯಿ ಭಾಗ್ಯ ಯೋಜನೆಗೆ ಅನುದಾನವನ್ನು ಇತ್ತೀಚೆಗೆ ಬಿಡುಗಡೆ ಮಾಡಿರುವುದಿರಿಂದ ವಚ್ಚವನ್ನು ನಿರೀಕ್ಷಿಸಲಾಗಿದೆ.

ಈ) ಈ ಯೋಜನೆಯ ಪ್ರಯೋಜನ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು?

ಆರೋಗ್ಯ ಕವಚ ಯೋಜನೆಯಡಿ ಈವರೆಗೆ ಒಟ್ಟು 11,22,645 ಕರೆಗಳನ್ನು ಸ್ವೀಕರಿಸಿದ್ದು, ಒಟ್ಟು 13,334 ಜೀವಗಳನ್ನು ಉಳಿಸಲಾಗಿದೆ ಹಾಗೂ 1784 ಪೋಲಿಸ್ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಕರೆಗಳನ್ನು ನಿರ್ವಹಿಸಲಾಗಿದೆ. ತಾಯಿ ಭಾಗ್ಯ ಯೋಜನೆಯ ಪ್ರಯೋಜನ ಪಡೆಯುವ ಬಗ್ಗೆ ಸಾರ್ವಜನಿಕರಲ್ಲಿ ಇನ್ನೂ ಅರಿವು ಮೂಡಿಸಲಾಗುತ್ತಿದೆ.

ಉ) ಪ್ರಸಕ್ತ ಸಾಲಿನಲ್ಲಿ ಈ ಯೋಜನೆಯನ್ನು ಇನ್ನೂ ಸಮರ್ಪಕವಾಗಿ ಜಾರಿಗೊಳಿಸಲು ಸರ್ಕಾರದ ಮುಂದಿರುವ ಕ್ರಮಗಳೇನು?

ಒಪ್ಪಂದದ ಪ್ರಕಾರ ದಿನಾಂಕ: 31/3/2009ರೊಳಗೆ ಒಟ್ಟು 150 ಆಂಬುಲೆನ್ಸ್ ಸೇವೆಗಳನ್ನು ನೀಡಬೇಕಾಗಿದ್ದು, ದಿನಾಂಕ: 17/2/2009 ರಂದೇ ಸದರಿ ಗುರಿಯನ್ನು ಸಾಧಿಸಲಾಗಿದೆ. ಮಾರ್ಚ್ 2010ರ ವೇಳೆಗೆ ಉಳಿದ 367 ಆಂಬುಲೆನ್ಸ್‌ಗಳ ಸೇವೆಗಳನ್ನು ರಾಜ್ಯದ್ಯಂತ ಒದಗಿಸಲಾಗುವುದು. ತಾಯಿ ಭಾಗ್ಯ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಆಯಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಈ ಯೋಜನೆಯಡಿಯಲ್ಲಿ ಖಾಸಾಗಿ ಆಸ್ಪತ್ರೆಗಳೊಂದಿಗೆ ಕರಾರು ಈ ಕೆಳಕಂಡಂತೆ ಮಾಡಿಕೊಳ್ಳಲಾಗಿದೆ.

ಕ್ರ.ಸಂ.	ಜಿಲ್ಲೆ	ಒಟ್ಟು ಅರ್ಜಿಗಳು			
		ಸರ್ಕಾರಿ	ಸಹಿ	ಖಾಸಗಿ	ಸಹಿ
1	ಬೀದರ್	6	–	3	3
2	ಗುಲ್ಬರ್ಗಾ	2	2	6	6
3	ರಾಯಚೂರು	5	4	5	2
4	ಕೊಪ್ಪಳ	3	1	1	1
5	ಬಿಜಾಪುರ	2	2	14	14
6	ಬಾಗಲಕೋಟೆ	6	6	30	29
7	ಚಾಮರಾಜನಗರ	4	3	1	–

ಸಂಖ್ಯೆ: ಆಕುಕ 13 ಎಸ್ಬಿಕ್ಯೂ 2009

(ಬಿ. ಶ್ರೀರಾಮುಲು)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

<u>ಕರ್ನಾಟಕ ವಿಧಾನ ಸಭೆ</u>

377 ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು)

ಪ್ರೊ.ಡಾ: ಮುಮ್ತಾಜ್ ಅಲಿ ಖಾನ್ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು